# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ವಿಧಾನ ಸಭೆಯ ಸದಸ್ಯರ ಹೆಸರು | ಶ್ರೀ ಬಸನಗೌಡ ಬಾದರ್ಲಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1159 |
| ಉತ್ತರಿಸಬೇಕಾದ ದಿನಾಂಕ | 18.03.2025 |
| ಉತ್ತರಿಸಬೇಕಾದ ಸಚಿವರು | ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಪ್ಪಳ ತಾಲ್ಲೂಕಿನ ಗಿಣಿಗೇರಿ, ಕನಕಾಪುರ, ಬಸಪುರ, ಅಲ್ಲಾನಗರ, ಕಿಡದಾಳ, ಬೇವಿನಹಳ್ಳಿ, ಹಿರೇಕಾಸನಕಂಡಿ, ಹಿರೇಬಗನಾಳ, ಚಿಕ್ಕಬಗನಾಳ, ಪಾಲವರ್ತಿ, ಕುಣಿಕೇರಿ, ಕುಣಿಕೇರಿ ತಾಂಡಾ ಹಾಗೂ ಕೊಪ್ಪಳ ನಗರಕ್ಕೆ ಹೊಂದಿಕೊಂಡಿರುವ ಉಕ್ಕು, ಸಿಮೆಂಟ್, ರಾಸಾಯನಿಕ ಗೊಬ್ಬರ ಕೈಗಾರಿಕೆ ಹಾಗೂ ಇತರೇ ಕೈಗಾರಿಕೆಗಳು ಹೊರಬಿಡುತ್ತಿರುವ ಧೂಳು, ಹೊಗೆ, ಶಬ್ಧಮಾಲಿನ್ಯ, ವಾಯುಮಾಲಿನ್ಯ, ಜಲಮಾಲಿನ್ಯದಿಂದ ಇಲ್ಲಿನ ಜನರು ಅಸ್ತಮಾ, ಟಿ.ಬಿ, ಹೃದಯರೋಗ, ಕರಳು ಬೇನೆ ಮುಂತಾದ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವುದು ಹಾಗೂ ರೈತರು ಬೆಳೆದ ಬೆಳೆಗಳು ಧೂಳಿನಿಂದ ಕೂಡಿದ್ದು, ಮತ್ತು ಜಾನುವಾರುಗಳು ಮೇವು ತಿನ್ನಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೊಪ್ಪಳ ತಾಲ್ಲೂಕು ವ್ಯಾಪ್ತಿಯಲ್ಲಿ ಕಾರ್ಯಾಚರಣೆಯಲ್ಲಿರುವ ಉಕ್ಕು, ಸಿಮೆಂಟ್, ರಾಸಾಯನಿಕ ಗೊಬ್ಬರ ಕೈಗಾರಿಕೆ ಹಾಗೂ ಇತರೇ ಕೈಗಾರಿಕೆಗಳ ವಿರುದ್ಧ ಗ್ರಾಮಸ್ಥರು ಮತ್ತು ಸಾರ್ವಜನಿಕರಿಂದ ಧೂಳು, ಹೊಗೆ ಹಾಗು ವಾಯು ಮಾಲಿನ್ಯ, ಬೆಳೆಹಾನಿ ಮತ್ತು ಆರೋಗ್ಯ ಸಮಸ್ಯೆ/ಕಾಯಿಲೆ ಉಂಟಾಗುತ್ತಿರುವ ಹಾಗೂ ಜಾನುವಾರುಗಳ ಮತ್ತು ಪರಿಸರದ ಮೇಲೆ ಗಂಭೀರ ಪರಿಣಾಮಗಳಾಗುತ್ತಿರುವ ಬಗ್ಗೆ ಸರ್ಕಾರಕ್ಕೆ ದೂರುಗಳು ಸ್ವೀಕೃತವಾಗಿರುತ್ತವೆ. |
| ಆ) | ಬಂದಿದ್ದಲ್ಲಿ, ಇದರ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸರ್ಕಾರಕ್ಕೆ ದೂರುಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ, ಈ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಪಾಂಜ್ ಐರನ್ ಘಟಕಗಳನ್ನು ಮಂಡಳಿಯ ಅಧ್ಯಕ್ಷರು, ಪರಿವೀಕ್ಷಣೆ ನಡೆಸಿದ್ದು, ಸಮ್ಮತಿ ಪತ್ರದ ಷರತ್ತುಗಳನ್ನು ಉಲ್ಲಂಘನೆ ಮಾಡುತ್ತಿದ್ದು ಕಂಡುಬಂದ ಕಾರಣ, ಮಂಡಳಿಯು 12 ಕೈಗಾರಿಕೆಗಳಿಗೆ ಜಲಕಾಯ್ದೆ, 1974 ಮತ್ತು ವಾಯುಕಾಯ್ದೆ, 1981ರ ಅಡಿಯಲ್ಲಿ ಪ್ರಸ್ತಾವಿಕ ನಿರ್ದೇಶನವನ್ನು (Notice of Proposed Directions) ದಿನಾಂಕ:02.11.2023 ರಂದು ಜಾರಿಮಾಡಿರುತ್ತದೆ.<br><br>ಮುಂದುವರೆದಂತೆ, ಎಲ್ಲಾ 12 ಸ್ಪಾಂಜ್ ಐರನ್ ಕೈಗಾರಿಕೆಗಳ ಪ್ರತಿನಿಧಿಗಳೊಂದಿಗೆ ಮಂಡಳಿಯ ಕೇಂದ್ರ ಕಚೇರಿಯಲ್ಲಿ |

ಮೌಖಿಕ ದಿನಾಂಕ:22.01.2024, 02.04.2024 ಮತ್ತು 03.04.2024 ವಿಚಾರಣೆ ನಡೆಸಿ ಅಗತ್ಯ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ನಿರ್ದೇಶನ ನೀಡಿದ್ದು, ಮಂಡಳಿಯ ನಿರ್ದೇಶನ ಪಾಲನೆ ಮಾಡದ ಕೈಗಾರಿಕೆಗಳ ಕಾರ್ಯಸೂಚಿಯನ್ನು ಮಂಡಳಿಯ ರಾಜ್ಯ ಮಟ್ಟದ ಜಾರಿ ಸಮಿತಿ (SLEC) ಸಭೆಯಲ್ಲಿ ಮಂಡಿಸಲಾಗಿತ್ತು. ಸದರಿ ಸಮಿತಿ ಸಭೆಯ ಶಿಫಾರಸಿನಂತೆ, ಈ ಕೆಳಕಂಡ 07 ಕೈಗಾರಿಕೆಗಳ ಪ್ರತಿನಿಧಿಗಳನ್ನು ಮುಂದಿನ ರಾಜ್ಯ ಮಟ್ಟದ ಜಾರಿ ಸಮಿತಿ (SLEC) ಸಭೆಯಲ್ಲಿ ಕೈಗಾರಿಕೆಗಳು ಅನುಸರಿಸುತ್ತಿರುವ ಮಾಲಿನ್ಯ ನಿಯಂತ್ರಣಗಳ ಕ್ರಮಗಳ ಬಗ್ಗೆ ತಾಂತ್ರಿಕ ಪ್ರಸ್ತುತಿಯನ್ನು (Technical Presentation) ಮಂಡಿಸುವಂತೆ ಸೂಚಿಸಲಾಗಿತ್ತು.

1. ಮೆ|| ಕಲ್ಯಾಣಿ ಸ್ಟೀಲ್ಸ್, ಗೀಣಿಗೆರಾ ಗ್ರಾಮ, ತಾಲೂಕು ಮತ್ತು ಜಿಲ್ಲೆ-ಕೊಪ್ಪಳ
2. ಮೆ|| ಮುಕುಂದ ಸ್ಟೀಲ್ಸ್, ಗೀಣಿಗೆರಾ ಗ್ರಾಮ, ತಾಲೂಕು ಮತ್ತು ಜಿಲ್ಲೆ-ಕೊಪ್ಪಳ
3. ಮೆ|| ವನ್ಯಾ ಸ್ಟೀಲ್ ಪ್ರೈವೇಟ್ ಲಿಮಿಟೆಡ್ (ಯುನಿಟ್-1) ಹಿರೇಬಗನಾಳ ಗ್ರಾಮ, ತಾಲೂಕು ಮತ್ತು ಜಿಲ್ಲೆ-ಕೊಪ್ಪಳ
4. ಮೆ|| ವನ್ಯಾ ಸ್ಟೀಲ್ ಪ್ರೈವೇಟ್ ಲಿಮಿಟೆಡ್ (ಯುನಿಟ್-2) ಹಿರೇಬಗನಾಳ ಗ್ರಾಮ, ತಾಲೂಕು ಮತ್ತು ಜಿಲ್ಲೆ-ಕೊಪ್ಪಳ
5. ಮೆ|| ಹೆಚ್ ಆರ್ ಜಿ ಅಲಾಯ್ಸ್ & ಸ್ಟೀಲ್ ಲಿಮಿಟೆಡ್, ಹಿರೇಕಾಸನಕಂಡಿ ಗ್ರಾಮ, ತಾಲೂಕು ಮತ್ತು ಜಿಲ್ಲೆ-ಕೊಪ್ಪಳ
6. ಮೆ|| ಪಿ ಬಾಲ ಸುಬ್ಬ ಶೆಟ್ಟಿ ಪವರ್ & ಸ್ಟೀಲ್ ಲಿಮಿಟೆಡ್, ಹಾಲವರ್ತಿ ಗ್ರಾಮ, ತಾಲೂಕು ಮತ್ತು ಜಿಲ್ಲೆ-ಕೊಪ್ಪಳ
7. ಮೆ|| ಹೊಸಪೇಟ ಇಸ್ಪಾತ್ ಪ್ರೈವೇಟ್ ಲಿಮಿಟೆಡ್, ಅಲ್ಲಾನಗರ ಗ್ರಾಮ, ತಾಲೂಕು ಮತ್ತು ಜಿಲ್ಲೆ-ಕೊಪ್ಪಳ

ಅದರಂತೆ, ಸದರಿ ಕೈಗಾರಿಕೆಗಳ ಪ್ರತಿ ನಿಧಿಗಳು ದಿನಾಂಕ:10.09.2024ರ ಸಮಿತಿ ಸಭೆಯಲ್ಲಿ ತಾಂತ್ರಿಕ ಪ್ರಸ್ತುತಿಯನ್ನು (Technical Presentation) ಮಂಡಿಸಿರುತ್ತಾರೆ. ಸದರಿ ಸಭೆಯ ಶಿಫಾರಸಿನಂತೆ, ಮಾಲಿನ್ಯ ನಿಯಂತ್ರಣ ಉಪಕರಣ/ಕ್ರಮಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಕೈಗೊಂಡ ಕಾರ್ಯಪ್ರಗತಿ ಮತ್ತು ನಿಯಂತ್ರಣ ಕ್ರಮಗಳ ವೆಚ್ಚದ ವರದಿಯನ್ನು ದಾಖಲೆಗಳೊಂದಿಗೆ ಮಂಡಳಿಗೆ ಸಲ್ಲಿಸುವಂತೆ ಕೈಗಾರಿಕೆಗಳಿಗೆ ಸೂಚಿಲಾಗಿದ್ದು, ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಚೇರಿ, ವಿಜಯನಗರ ಇವರಿಗೆ ಸದರಿ ವರದಿಗಳನ್ನು ಪರಿಶೀಲಿಸಿ ಸೂಕ್ತ ಶಿಪ್ಪಾರಸ್ಸಿನೊಂದಿಗೆ ಕೇಂದ್ರ ಕಚೇರಿಗೆ ವರದಿ ಸಲ್ಲಿಸುವಂತೆ ತಿಳಿಸಲಾಗಿತ್ತು.

| | | |
|---|---|---|
| | | ಅದರಂತೆ, ಹಿರಿಯ ಪರಿಸರ ಅಧಿಕಾರಿಗಳು, ವಿಜಯನಗರ ಮತ್ತು ಪರಿಸರ ಅಧಿಕಾರಿ, ಕೊಪ್ಪಳ ಇವರು ದಿನಾಂಕ:20.11.2024, 27.11.2024 ಮತ್ತು 28.11.2024 ರಂದು ಕೈಗಾರಿಗಳ ಪರಿವೀಕ್ಷಣೆ ನಡೆಸಿದ್ದು, ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ವಿಫಲವಾಗಿರುವ/ಉಲ್ಲಂಘಿಸಿರುವ ಕೈಗಾರಿಕೆಗಳ ವಿರುದ್ಧ ವಾಯುಕಾಯ್ದೆ&ಜಲಕಾಯ್ದೆಗಳ ಪ್ರಕಾರ ಸೂಕ್ತ ಕಾನೂನು ಕ್ರಮಕೈಗೊಳ್ಳುವಂತೆ ಶಿಪ್ಪಾರಸ್ಸು ನೀಡಿ ವರದಿಯನ್ನು ಸಲ್ಲಿಸಿರುತ್ತಾರೆ.<br><br>ಇದೇ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಬೆಂಗಳೂರು ಇವರು ಘನ ವ್ಯಕ್ತಿಗಳಿಂದ ಕೊಪ್ಪಳ ಜಿಲ್ಲೆಯಲ್ಲಿ ಕೈಗಾರಿಕೆಗಳ ಮಾಲಿನ್ಯ ತೀವ್ರತೆಯ ಪ್ರಭಾವವನ್ನು ಅಧ್ಯಯನ ಮಾಡುವ ಬಗ್ಗೆ ದೂರು ಸ್ವೀಕೃತವಾದ ಹಿನ್ನಲೆಯಲ್ಲಿ, ವಿವಿಧ ಇಲಾಖೆಯ ತಾಂತ್ರಿಕ ಅಧಿಕಾರಿಗಳ ತಂಡವನ್ನು ರಚಿಸಿ, ದಿನಾಂಕ:11.12.2024 ರಿಂದ 13.12.2024ರವರೆಗೆ ಕೈಗಾರಿಕೆಗಳನ್ನು ಪರಿವೀಕ್ಷಣೆ ನಡೆಸಿ, ಪರಿಸರ ಸಂಬಂಧಿತ ಸಮಸ್ಯೆಗಳು ಮತ್ತು ಸೂಕ್ತ ಪರಿಹಾರ ಕ್ರಮಗಳ ಬಗ್ಗೆ ಸಮಗ್ರ ವರದಿಯನ್ನು ಹಾಗೂ ಅಲ್ಪಾವಧಿ ಕ್ರಿಯಾಯೋಜನೆ ಹಾಗು ಧೀರ್ಘಾವಧಿ ಕ್ರಿಯಾಯೋಜನೆಗಳ ಅಂಶಗಳನ್ನು ಕಾರ್ಯಗತಗೊಳಿಸಬೇಕೆಂಬ ಶಿಫಾರಸ್ಸಿನೊಂದಿಗೆ ದಿನಾಂಕ:07.02.2025 ರಂದು ಸಲ್ಲಿಸಿರುತ್ತಾರೆ. ವರದಿಯಲ್ಲಿ ತಿಳಿಸಿರುವ ನ್ಯೂನ್ಯತೆಗಳಿಗೆ ಸಂಬಂಧಿಸಿದಂತೆ, ಮಂಡಳಿಯು ದಿನಾಂಕ: 17.02.2025ರಂದು ಕೈಗಾರಿಕೆಗಳಿಗೆ ನೋಟಿಸ್ ಗಳನ್ನು ಜಾರಿಮಾಡಿರುತ್ತದೆ.<br><br>ಮುಂದುವರೆದಂತೆ, ಸದರಿ ವರದಿಯಲ್ಲಿ ಮುಖ್ಯವಾಗಿ, ಮಾಲಿನ್ಯ ನಿಯಂತ್ರಣ ಕ್ರಮಗಳು ಪರಿಣಾಮಕಾರಿಯಾಗಿ ಪ್ರಗತಿಯಾಗುವವರೆಗೂ, ಕೊಪ್ಪಳ ತಾಲೂಕಿನ ಕ್ಲಸ್ಟರ್ ಪ್ರದೇಶದಲ್ಲಿ ಸ್ಪಾಂಜ್ ಐರನ್ ಘಟಕಗಳು/ಉಕ್ಕು ಕೈಗಾರಿಕೆಗಳ ಸ್ಥಾಪನೆ ಅಥವಾ ಪ್ರಸ್ತುತ ಅಸ್ತಿತ್ವದಲ್ಲಿರುವ ಕೈಗಾರಿಕೆಗಳ ವಿಸ್ತರಣೆಯನ್ನು ತಾತ್ಕಾಲಿಕವಾಗಿ ನಿರ್ಬಂಧಿಸುವಂತೆ ಅಥವಾ Maratorium ವಿಧಿಸುವಂತೆ ಶಿಫಾರಸು ಮಾಡಿರುತ್ತದೆ ಮತ್ತು ಸ್ಥಳೀಯ ಮಟ್ಟದಲ್ಲಿ ಜಿಲ್ಲಾ ಸಮನ್ವಯ ಸಮಿತಿಯನ್ನು ರಚಿಸುವಂತೆ ವರದಿ ನೀಡಿರುತ್ತದೆ.<br><br>MoEF&CC ತಾಂತ್ರಿಕ ತಂಡದ ವರದಿ ಹಾಗೂ ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಚೇರಿ, ವಿಜಯನಗರ ಇವರು ಸಲ್ಲಿಸಿರುವ ವರದಿ ಮತ್ತು ಶಿಫಾರಸ್ಸನ್ನು ಮುಂದಿನ ರಾಜ್ಯ ಮಟ್ಟದ ಜಾರಿ ಸಮಿತಿ (SLEC) ಸಭೆಯಲ್ಲಿ ಮಂಡಿಸಿ, ಸಮಿತಿಯ ನಿರ್ಣಯವನ್ನು ಆಧರಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| | | ಕೊಪ್ಪಳ ತಾಲ್ಲೂಕಿನಲ್ಲಿ ಮೆ॥ ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್, ಸಿಮೆಂಟ್ ಗ್ರೈಡಿಂಗ್ ಘಟಕ ಕಾರ್ಯನಿರ್ವಹಿಸುತ್ತಿದ್ದು, ಸಮ್ಮತಿ ಪತ್ರವು ದಿನಾಂಕ:30.06.2026ರವರೆಗೆ ಚಾಲ್ತಿಯಲ್ಲಿರುತ್ತದೆ. ಉದ್ದಿಮೆ ವಿರುದ್ಧ ದೂರುಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ ಪ್ರಾದೇಶಿಕ ಕಛೇರಿಯು ದಿನಾಂಕ:17.02.2025 ರಂದು ನೋಟೀಸ್ ನೀಡಲಾಗಿದ್ದು, ಉದ್ದಿಮೆಯು ಸಲ್ಲಿಸುವ ಉತ್ತರವನ್ನು ಆಧರಿಸಿ ಕ್ರಮಕೈಗೊಳ್ಳಲಾಗುವುದು.<br><br>ಕೊಪ್ಪಳ ತಾಲ್ಲೂಕಿನ ಮೆ॥ ಕೋರಮಂಡಲ ಇಂಟರ್ ನ್ಯಾಷನಲ್ ಘಟಕವು ರಾಸಾಯನಿಕ ಗೊಬ್ಬರ ತಯಾರಿಸುತ್ತಿದ್ದು, ಸಮ್ಮತಿ ಪತ್ರವು ದಿನಾಂಕ:30.06.2026 ರವರೆಗೆ ಚಾಲ್ತಿಯಲ್ಲಿರುತ್ತದೆ. ಉದ್ದಿಮೆ ವಿರುದ್ಧ ದೂರುಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ 20.08.2024 ರಂದು ಮಂಡಳಿಯ ಪ್ರಾದೇಶಿಕ ಅಧಿಕಾರಿಗಳು ಪರಿವೀಕ್ಷಣೆ ನಡೆಸಿ, ಉದ್ದಿಮೆಯು ಮಂಡಳಿ ನಿಗದಿಪಡಿಸಿ ನಿಬಂಧನೆಯ ಅನುಸಾರ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ.<br><br>ಕೊಪ್ಪಳ ತಾಲ್ಲೂಕಿನ ಮೆ॥ ಕೆ.ಪಿ.ಆರ್ ಆಗ್ರೋ ಕೆಮಿಕಲ್ಸ್ ಮತ್ತು ಮೆ॥ ಕೆ.ಪಿ.ಆರ್ ಆಗ್ರೋ ಕೆಮಿಕಲ್ಸ್ (ಆಸಿಡ್ ಡಿವಿಷನ್) ಘಟಕವು ರಾಸಾಯನಿಕ ಗೊಬ್ಬರ ತಯಾರಿಸುತ್ತಿದ್ದು, ಸಮ್ಮತಿ ಪತ್ರವು ದಿನಾಂಕ:30.06.2026 ರವರೆಗೆ ಚಾಲ್ತಿಯಲ್ಲಿರುತ್ತದೆ. ಉದ್ದಿಮೆ ವಿರುದ್ಧ ದೂರುಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ ಪ್ರಾದೇಶಿಕ ಕಛೇರಿಯು ದಿನಾಂಕ:17.02.2025 ರಂದು ನೋಟೀಸ್ ನೀಡಲಾಗಿದ್ದು, ಉದ್ದಿಮೆಯು ಸಲ್ಲಿಸುವ ಉತ್ತರವನ್ನು ಆಧರಿಸಿ ಕ್ರಮಕೈಗೊಳ್ಳಲಾಗುವುದು. |
| **ಇ)** | ಈ ಕೈಗಾರಿಕೆಗಳನ್ನು ಮುಚ್ಚುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | MoEF&CC ತಾಂತ್ರಿಕ ತಂಡದ ವರದಿ ಹಾಗೂ ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಚೇರಿ, ವಿಜಯನಗರ ಇವರು ಸಲ್ಲಿಸಿರುವ ವರದಿ ಮತ್ತು ಶಿಫಾರಸ್ಸನ್ನು ಮುಂದಿನ ರಾಜ್ಯ ಮಟ್ಟದ ಜಾರಿ ಸಮಿತಿ (SLEC) ಸಭೆಯಲ್ಲಿ ಮಂಡಿಸಿ, ಸಮಿತಿಯ ನಿರ್ಣಯವನ್ನು ಆಧರಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ:** ಅಪಜೀ 94 ಇಪಿಸಿ 2025

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.